**OS No.158/2019**
**DW.1**

**<u>ಸಾಕ್ಷಿಗೆ ದಿನಾಂಕ 03.12.2024 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರೆದಿ ಪಾಟೀ ಸವಾಲುः</u> ವಾದಿ ಪರ ವಕೀಲರಿಂದ**

ಯಾವ ದಿನಾಂಕ ಮತ್ತು ವರ್ಷದಂದು ಸರ್ವೇ ಮಾಡಿಸಿರುತ್ತೇನೆ ಎಂದು ಗೊತ್ತಿಲ್ಲ. 2019ರಲ್ಲಿ ಸರ್ವೇ ಮಾಡಿಸಲು ಅರ್ಜಿ ಹಾಕಿರುತ್ತೇನೆ ಹಾಗೂ ಸರ್ವೇ ಅಧಿಕಾರಿಯನ್ನು ಕರೆದುಕೊಂಡು ಹೋಗಿ ಸರ್ವೇ ಮಾಡಿಸಲು ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿ. ಅದೇ ದಿः 08.03.2019ರಲ್ಲಿಯೂ ಸಹ ಸರ್ವೇ ಮಾಡಿಸಲು ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ವಾದಿಯು ನಮ್ಮ ಜಮೀನಿಗೆ ಯಾವ ಕಾರಣಕ್ಕೆ ಅಳತೆ ಮಾಡಿಸುತ್ತಿದ್ದೀರಾ ಎಂದು ತಕರಾರು ಎತ್ತಿರುತ್ತಾರೆ ಎಂದರೆ ಸರಿ. ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ ನೋಟೀಸ್ ಆಗಲೀ ಅಥವಾ ಅವರ ಪರವಾನಿಗೆಯನ್ನು ಪಡೆಯದೇ ಅಳತೆ ಮಾಡಿಸುವ ಕಾರ್ಯಕ್ಕೆ ಮುಂದಾಗಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲರಿಗೂ ನೋಟೀಸ್ ನೀಡಿರುತ್ತೇನೆ, ಸುಬ್ರಮಣ್ಯಮ್ ರವರಿಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸುಬ್ರಮಣ್ಯಮ್‌ರವರು 2006ರಲ್ಲಿಯೇ ಅವರ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2019ರಲ್ಲಿ ಸುಬ್ರಮಣ್ಯಮ್‌ರವರ ಮೇಲೆ ನೋಟೀಸ್ ಜಾರಿ ಮಾಡಿದ್ದು, ಸದರಿ ನೋಟೀಸ್ ಅವರ ಮೇಲೆ ಜಾರಿಯಾದರೂ ಅದು ಯಾವುದೇ ಮಾನ್ಯತೆಯನ್ನು ಹೊಂದಿರುವುದಿಲ್ಲ ಕಾರಣ ಅವರು 2006ರಲ್ಲಿಯೇ ಅವರು ಸ್ವತ್ತಿನ ಮೇಲೆ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನಾನು ಆ ಸಮಯದಲ್ಲಿ ಕೆಲಸದಲ್ಲಿದ್ದೇ ಎಂದು ನುಡಿಯುತ್ತಾರೆ.

ನನಗೆ ಸರೋಜಮ್ಮರವರು ಖರೀದಿಗೆ ಕೊಟ್ಟಿರುತ್ತಾರೆ, ಅವರು ಯಾವುದೇ ಸರ್ವೇಯನ್ನು ಮಾಡಿಸಿರುವುದಿಲ್ಲ. ನಾನಾಗಲೀ ಅಥವಾ ನನ್ನ ಮಾರಾಟಗಾರರು ಸರೋಜಮ್ಮರವರಾಗಲೀ ಸರಿಯಾಗಿ ಅಳತೆಯನ್ನು ಮಾಡಿಸದೇ ತಪ್ಪು ತಪ್ಪಾಗಿ ಅಳತೆಗಳನ್ನು ತೋರಿಸಿ ಕ್ರಯಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಸ್ವತ್ತಿನ ದಕ್ಷಿಣದ ಕಡೆಗೆ ಸರ್ವೇ ನಂ. 50/2 ಇದ್ದು, ಸದರಿ ಸರ್ವೇ ನಂಬರಿನಲ್ಲಿ ನನ್ನ ಆಸ್ತಿ ಇರುತ್ತದೆ ಹೊರತಾಗಿ ಸರ್ವೇ ನಂ. 50/1ರಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರಿಯಾಗಿ ಅಳತೆ ಮಾಡದ ಕಾರಣ ಕ್ರಯಪತ್ರದಲ್ಲಿಯೂ ಸಹ ಸರ್ವೇ ನಂಬರ್ ನ್ನು ತಪ್ಪಾಗಿ ನಮೂದು ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ಸಾಕ್ಷಿಗೆ ನಿಪಿ-13ನ್ನು ತೋರಿಸಲಾಗಿ ಅದರಲ್ಲಿರುವ ಪಾಯ ಹಾಕಿರುವ ಜಾಗ ಹಾಗೂ ಅದರ ಮುಂದಿರು ಜಾಗವು ನಂದಿನಿ ಮತ್ತು ತಿಪ್ಪರಾಜುರವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯದ ಬಗ್ಗೆ ಮಾಹಿತಿ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ವಾದಿಗಳು ಸ್ವಾಧೀನದಲ್ಲಿರುವ ಸ್ವತ್ತಿನ ಮೇಲೆ ಸರ್ವೇಗಳನ್ನು ಮಾಡಿಸಲು ಮುಂದಾಗಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಸ್ವತ್ತನ್ನು ನಗರಸಭೆಗೆ ಸೇರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೇ ಮಾಡಿಸದೇ ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗಳ ಜಾಗ ಇರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಗೊತ್ತಿದ್ದರೂ ಸಹ ನೋಟೀಸ್ ಜಾರಿ ಮಾಡದೇ ಸರ್ವೇಯನ್ನು ಮಾಡಿಸಲು ಸುಬ್ರಮಣಿಯವರಿಗೆ ನೋಟೀಸ್ ನೀಡಿರುತ್ತೇನೆ ಎಂದರೆ  ವಾದಿಗಳು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ:** ಇಲ್ಲ

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**